ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಪ್ರಶಸ್ತಿ ಪ್ರದಾನ ಸಮಾರಂಭ

1989

ಕಾರ್ಯಕ್ರಮ

ಸ್ವಾಗತ	:	ಶ್ರೀ ಹಿ. ಚಿ. ಬೋರಲಿಂಗಯ್ಯ
ಪ್ರಶಸ್ತಿ ವಾಚನ	:	ಶ್ರೀ ರಂಗಾರೆಡ್ಡಿ ಕೋಡಿರಾಂಪುರ
ಪ್ರಶಸ್ತಿ ಮತ್ತು ಬಹುಮಾನ ವಿತರಣೆ	:	ಶ್ರೀ ಯಂ. ವೀರಪ್ಪ ಮೊಯ್ಲಿ
ಪ್ರಶಸ್ತಿ ಪಡೆದವರ ಪರವಾಗಿ ಮಾತು	:	ಶ್ರೀ ಎಚ್. ಎಲ್. ನಾಗೇಗೌಡ
ಮುಖ್ಯ ಅತಿಥಿಗಳ ಮಾತು	:	ಶ್ರೀ ಐ. ಎಂ. ವಿಠ್ಠಲಮೂರ್ತಿ
ಅಧ್ಯಕ್ಷತೆ	:	ಡಾ॥ ಎಸ್. ಕೆ. ಕರೀಂಖಾನ್
ವಂದನಾರ್ಪಣೆ	:	ಡಾ॥ ಸೋಮಶೇಖರ ಇಮ್ರಾಪುರ
ಸಾಂಸ್ಕೃತಿಕ ಕಾರ್ಯಕ್ರಮ	:	ಮಣಿಪುರದ ಕಲಾವಿದರು
ನಿರೂಪಣೆ	:	ಶ್ರೀ ನಗೀನ್ ಅಹ್ಮದ್

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ 1989ರ ಗೌರವ ಪ್ರಶಸ್ತಿಗಳು

ಪ್ರಶಸ್ತಿ ಪಡೆದವರ ಪರಿಚಯ

ಜಿ. ಎನ್. ಮೋಹನ್



ಎಚ್. ಎಲ್. ನಾಗೇಗೌಡ

ಅಧ್ಯಕ್ಷರು, ಕರ್ನಾಟಕ ಜಾನಪದ ಟ್ರಸ್ಟ್
ಕುಮಾರಪಾರ್ಕ್ ಪಶ್ಚಿಮ
ಬೆಂಗಳೂರು–560020

ಆರು ವರ್ಷಗಳ ಕಾಲ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿದ್ದ ಎಚ್. ಎಲ್. ನಾಗೇಗೌಡರು ಜಾನಪದ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಳತೆಗೆ ಒಗ್ಗದ್ದು. ಐ.ಎ.ಎಸ್. ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಾ ಇವರು ಬೆಳೆಸಿಕೊಂಡ ಜಾನಪದ ಆಸಕ್ತಿಯಿಂದಾಗಿ ಜಾನಪದ ಕ್ಷೇತ್ರಕ್ಕೆ ಅತ್ಯಮೂಲ್ಯ ಕೊಡುಗೆಗಳು ಸಿಕ್ಕಿವೆ. ಕಾದಂಬರಿಕಾರರಾಗಿ, ಕಥೆಗಾರ ರಾಗಿ, ಕವಿಯಾಗಿ, ಜಾನಪದ ಸಂಗ್ರಾಹಕರಾಗಿ, ಸಂಪಾದಕರಾಗಿ ಇವರ ಕೆಲಸ ನಿರಂತರವಾಗಿ ಸಾಗಿದೆ. ಹಲವು ವರ್ಷಗಳ ಜಾನಪದ ಜಗತ್ತನ್ನು ತಮ್ಮೊಳಗೆ ಹರಡಿಟ್ಟುಕೊಂಡಿರುವ ನಾಗೇಗೌಡರು ನಡೆದಾಡುವ ಜಾನಪದ ವಿಶ್ವಕೋಶ ಎಂದರೆ ತಪ್ಪಾಗಲಾರದು. ಸೋಬಾನೆ ಚಿಕ್ಕಮ್ಮನ ಪದಗಳು, ಕರ್ನಾಟಕ ಜಾನಪದ ಕಥೆಗಳು, ಪದವವೆ ನಮ್ಮ ಎದೆಯಲ್ಲಿ ಇವರ ಪ್ರಮುಖ ಜಾನಪದ ಕೃತಿಗಳು, ಕರ್ನಾಟಕ ಜಾನಪದ ಪ್ರಪಂಚದ ಕಣ್ಣೋಟ ಒದಗಿಸುವ ಕರ್ನಾಟಕ ಜಾನಪದ ಟ್ರಸ್ಟ್ ತನ್ನ ಸಂಗ್ರಹಗಳಿಂದಾಗಿ ಅತ್ಯಮೂಲ್ಯ ಕೈಪಿಡಿ ಯಾಗಿ ಉಳಿದಿದೆ. ಇವರ ಸಂಗ್ರಹದಲ್ಲಿರುವ ಹಾಡುಹಸೆಗಳು ಲೆಕ್ಕವಿಲ್ಲ ದಷ್ಟು.

'ಜಾನಪದ ಲೋಕ' ಇವರ ವಿಶಿಷ್ಟ ಕನಸು. ಡಿಸ್ನಿಲ್ಯಾಂಡ್ ಮಾದರಿ ಯಲ್ಲಿ ಜಾನಪದ ಲೋಕವನ್ನು ಪರಿಚಯಿಸುವ ಉದ್ದೇಶದಿಂದ ರಾಮನಗರದ

ಬಳಿ ಪ್ರಾರಂಭಿಸಿರುವ ಜಾನಪದ ಲೋಕ ಇದೀಗ ರೆಕ್ಕೆಪಡೆದುಕೊಂಡಿದೆ. ಜಾನಪದ ಕಲೆ, ತಿಂಡಿ, ಊಟ, ಸಂಗ್ರಹಗಳನ್ನು ಒಂದೆಡೆ ಸೇರಿಸುವ ಇವರ ಕನಸು ನನಸಾಗುತ್ತಿದೆ.

ಕರ್ನಾಟಕ ಜಾನಪದದ ಇಂಗ್ಲಿಷ್ ಅವತರಣಿಕೆ ಇವರ ಮತ್ತೊಂದು ಮಹತ್ವದ ಕಾರ್ಯ. ಜಾನಪದದ ಏಕೈಕ ದ್ವೈಮಾಸಿಕ 'ಜಾನಪದ ಜಗತ್ತು' ಸಂಪಾದಕರೂ ಸಹ. ಇಷ್ಟೆಲ್ಲಾ ಅಳತೆಗೆ ಮೀರಿದ ಜಾನಪದ ಕಾರ್ಯದ ನಡುವೆ ಇವರ 'ಪ್ರವಾಸಿ ಕಂಡ ಇಂಡಿಯಾ' ಸಂಪುಟಗಳು, ದೂರದರ್ಶನದಲ್ಲಿ ಧಾರಾವಾಹಿಯಾಗಿ ಪ್ರಸಾರವಾದ 'ದೊಡ್ಡಮನೆ', ಅಲ್ಲದೆ 'ನನ್ನೂರು', 'ಕೆನಿಲ್ ವರ್ತ್', 'ನಾನಾಗುವೆ ಗೀಜಗನ ಹಕ್ಕಿ', 'ಬೆಟ್ಟದಿಂದ ಬಟ್ಟಲಿಗೆ' ಸಂಗ್ರಹ ಯೋಗ್ಯ ಕೃತಿಗಳು.

ಹಲವಾರು ಪ್ರಶಸ್ತಿ, ಪುರಸ್ಕಾರಗಳನ್ನು ಈಗಾಗಲೆ ಪಡೆದಿರುವ ಎಚ್. ಎಲ್. ನಾಗೇಗೌಡರಿಗೆ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಜಾನಪದ ತಜ್ಞರ ಪ್ರಶಸ್ತಿ ನೀಡಿ ಗೌರವಿಸುತ್ತಿದೆ.



ಜ್ಯೋತಿ ಹೊಸೂರ
ಪ್ರಾಂಶುಪಾಲರು
ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ
ರಾಯಬಾಗ
ಬೆಳಗಾವಿ ಜಿಲ್ಲೆ–591317

ಜಾನಪದ ಸಂಗ್ರಹ, ವಿಶ್ಲೇಷಣೆ, ವಿಮರ್ಶೆ, ಸಂಶೋಧನೆ ಕ್ಷೇತ್ರದಲ್ಲಿ ಜ್ಯೋತಿ ಹೊಸೂರ ಅವರದ್ದು ವಿಶಿಷ್ಟ ಹೆಸರು. ಹಲವು ಕಲೆಗಳ ಪರಿಚಯವಿರುವ ಇವರು ಜಾನಪದ ಲೇಖಕರಾಗಿ, ಪ್ರಕಾಶಕರಾಗಿ, ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಪ್ರಸ್ತುತ ರಾಯಬಾಗದ ಕಲಾ ಮತ್ತು ವಾಣಿಜ್ಯ ಮಹಾ ವಿದ್ಯಾಲಯದ ಪ್ರಾಂಶುಪಾಲಕರಾಗಿರುವ ಜ್ಯೋತಿ ಹೊಸೂರ ಅವರ 'ಬಿರಸಿ ಇಟ್ಟೀನ ಬೆಲ್ಲ ನೆನಗಡಲಿ', 'ಹೆಸರ ಹೇಳ್ತೀನಿ ಒಡಪ ಕಟ್ಟಿ', 'ಜಾತಿಗಾರರ ಜಾತಕ', 'ಕನಕದಾಸ ಜೀವನ ವಿಚಾರ', 'ಜಾನಪದ ಉಪಾಸನೆ' ಪ್ರಸಿದ್ಧ ಕೃತಿಗಳು. ಇತರರೊಂದಿಗೆ ಸೇರಿ 'ಬೆಳವಲ', 'ಕವಿಭೂಷಣ', 'ಪ್ರಜ್ಞಾ ಪ್ರಕಾಶ' ಪುಸ್ತಕಗಳನ್ನು ಸಂಪಾದಿಸಿದ್ದಾರೆ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮತ್ತು ಜಾನಪದ ಸಮ್ಮೇಳನಗಳಲ್ಲಿ ಹಲವಾರು ಪ್ರಬಂಧ ಮಂಡಿಸಿದ್ದಾರೆ. ಕಾಲಗತಿ ಪ್ರಕಾಶನ ಸಂಸ್ಥೆ ಆರಂಭಿಸಿ ಹಲವಾರು ಗ್ರಂಥಗಳನ್ನು ಪ್ರಕಟಿಸಿದ್ದು ಪ್ರಸ್ತುತ 'ಡೊಳ್ಳಿನ ಹಾಡು–ಒಂದು ಅಧ್ಯಯನ' ವಿಷಯ ಕುರಿತು ಅಧ್ಯಯನ ನಡೆಸಿದ್ದಾರೆ.



ನಾಗಪ್ಪಾ ಚಾಪಾಗೌಡ
ಸಣ್ಣಬಿಜ್ಜೂರ
ಗೋಕರ್ಣ ಅಂಚೆ
ಕುಮಟಾ ತಾಲ್ಲೂಕು
ಉತ್ತರ ಕನ್ನಡ

‘ನನ್ನ ಪಾಲಿಗೆ ಈ ಮುಪ್ಪಿನ ದಿನಗಳಲ್ಲಿ ಜೊತೆಯಾಗಿ ಉಳಿದಿರುವುದು ಬಡತನ ಮಾತ್ರ’ ಎನ್ನುವ ನಾಗಪ್ಪಾ ಚಾಪಾಗೌಡ ಅತ್ಯಂತ ಹಿಂದುಳಿದ ಬುಡಕಟ್ಟು ಜನಾಂಗವಾದ ಹಾಲಕ್ಕಿ ಒಕ್ಕಲಿಗರು. ಹಾಲಕ್ಕಿಗಳ ಪ್ರಮುಖ ವಾದ್ಯವಾದ ಗುಮಟೆಪಾಂಗನ್ನು ಮಿಡಿದರೆ ಸಾಕು ಮೂರು–ನಾಲ್ಕು ದಿನಗಳ ಕಾಲ ಹಾಡಿನ ಹೊಳೆಯನ್ನೇ ಹರಿಸಬಲ್ಲರು. ಬೇಸಾಯ ಮಾಡುತ್ತಲೇ ತಮ್ಮ ಬದುಕನ್ನು 50 ವರ್ಷಗಳ ಕಾಲ ಕಲೆಗಾಗಿ ಮೀಸಲಿಟ್ಟ ನಾಗಪ್ಪಾ ಸುಗ್ಗಿ ಕುಣಿತ, ಕೋಲಾಟ ಹಾಗೂ ಗಮಟೆ ಪಾಂಗು ಕಲೆಗಳಲ್ಲಿ ಸಿದ್ಧಹಸ್ತರು. ನಾಗಪ್ಪಾ ಅವರ ಭಂಡಾರದಲ್ಲಿ ಸಾವಿರಾರು ಗುಮಟೆ ಪದಗಳಿವೆ. 13ನೇ ವರ್ಷವಲ್ಲಿಯೇ ಗುಮಟೆ ಪಾಂಗು ಹಾಗೂ ಸುಗ್ಗಿ ಕುಣಿತ ಮೇಳಗಳಲ್ಲಿ ಭಾಗ ವಹಿಸಲು ಆರಂಭಿಸಿದ ನಾಗಪ್ಪಾ 70ನೆಯ ವರ್ಷದವರೆಗೆ ಕುಣಿತದೊಡನೆಯೇ ಬೆಳೆದು ಬಂದವರು. ಸಾವಿರಾರು ತರುಣ ಹಾಡುಗಾರರಿಗೆ ಹಾಡು ಕಲಿಸಿದ ನಾಗಪ್ಪಾ ಚಾಪಾಗೌಡರ ಆಸಕ್ತಿಯನ್ನು ಗುರುತಿಸಲು ಈ ವಿಶೇಷ ಮನ್ನಣೆ.



ಬಸಪ್ಪ
ಬೆಣ್ಣೇನಹಳ್ಳಿ
ಗುರುಗದಹಳ್ಳಿ ಅಂಚೆ
ತಿಪಟೂರು ತಾಲ್ಲೂಕು
ತುಮಕೂರು ಜಿಲ್ಲೆ

"ತಾತ ನನಗೆ ಕೊಟ್ಟ ತಂಬೂರಿಯೊಂದೇ ನನ್ನ ಆಸ್ತಿ" ಎನ್ನುವ ತಂಬೂರಿ ಬಸಪ್ಪ ಬಿಕ್ಷಾಟನೆ ಮಾಡಿ ಬದುಕು ದೂಡುತ್ತಿದ್ದಾರೆ. ಬಿಕ್ಷಾಟನೆ ಇವರಿಗೆ ವಂಶಪಾರಂಪರ್ಯವಾಗಿ ಬಂದ ಕೊಡುಗೆ. ಬಿಕ್ಷೆ ಬೇಡುತ್ತಾ ಮನೆಯ ಮುಂದೆ ಅಜ್ಜ ಹಾಡುತ್ತಿದ್ದ ಹಾಡುಗಳು ಈತನ ಎದೆಯಾಳಕ್ಕಿಳಿಯಿತು. ನೆನಪು ಪುಟಗಳಲ್ಲಿ ದಾಖಲಾಯಿತು. ತಂಬೂರಿ ಮೀಟಿದರೆ ಸಾಕು ಈಗ ಬಸಪ್ಪನವರು ಬಡತನದ ಕಟು ಅನುಭವಗಳನ್ನೂ ಮರೆತು ಹಾಡಿನ ಲೋಕದಲ್ಲಿ ಒಂದಾಗುತ್ತಾರೆ. ಹಣದಲ್ಲಿ ಬಡವನಾದರೂ ಹಾಡಿನಲ್ಲಿ ಹಿರಿಯಣ್ಣನಾದ ಈತ 25ಕ್ಕೂ ಹೆಚ್ಚು ಕಾವ್ಯಗಳನ್ನು ಹಾಡಬಲ್ಲ ಧೀಮಂತ ಕಲಾವಿದ. ಮಾಗಡಿ ಕೆಂಪೇಗೌಡ, ಬಂಜೆ ಹೊನ್ನಮ್ಮ, ಕಾಡು ಸಿದ್ದಮ್ಮನ ಕಥೆ, ಬಳ್ಳಾರಿ ಕಥೆ, ಸಿಪಾಯಿ ಕಥೆ, ಶೆಟ್ಟಣ್ಣ ಗೌಡನ ಕಥೆ ಇವರ ಆಸ್ತಿ. ಕಣ್ಣು ಕಾಣದ ಈ ದಿನಗಳಲ್ಲೂ ಗಂಜಿ ಕುಡಿದು ಕಲೆಯನ್ನು ಕೈಬಿಡದೆ ಉಳಿಸಿಕೊಂಡಿದ್ದಾರೆ.



ಬೊಮ್ಮಳ ಎಲಿಸವ್ವ
ಉಚ್ಚಂಗಿದುರ್ಗ
ಹರಪನಹಳ್ಳಿ ಅಂಚೆ
ಬಳ್ಳಾರಿ ಜಿಲ್ಲೆ

ಗುಣಸಾಗರಿ ಬೊಮ್ಮಳ ಎಲಿಸವ್ವ ಎಂದೇ ಹೆಸರಾದ ಎಲಿಸವ್ವ ಸಂಪ್ರದಾಯದ ಹಾಡುಗಳಿಗೆ ಹೊಸತನ ತುಂಬಿದವರು. ಹೊಲದಲ್ಲಿ ಕಳೆ ಕೀಳುವಾಗ ನಾಟಿ ಹಾಕುವಾಗ ಕೇಳಿದ ಹಾಡುಗಳನ್ನು ಈಕೆ ಮನಸ್ಸಿನ ಕಣಜದಲ್ಲಿ ತುಂಬಿಕೊಂಡರು. ಹಾಡುಗಳ ಕಂತೆ ತೀರಿದಾಗ ಎಲಿಸವ್ವ ತನಗೆ ಗೊತ್ತಿದ್ದ ಪದಗಳಿಗೆ ಹಾಡಿನ ರೂಪ ಕೊಟ್ಟರು.

ಕಾಳಿಂಗರಾಯನ ಪದ, ಮದಗದ ಕೆಂಚವ್ವನ ಪದ, ಗುಣಸಾಗರಿ ಪದ, ದಂಡಿನ ದುರುಗಮ್ಮನ ಪದ, ಕೊರವಂಜಿ ಪದ ಹೀಗೆ ಹಲವಷ್ಟು ಹಾಡುಗಳು ಇವರ ಬಂಡಾರದಲ್ಲಿವೆ. ಬೀಸುವ, ಕುಟ್ಟುವ ಹಾಗೂ ದೇವರ ಪದಗಳನ್ನು ಸ್ಥಳದಲ್ಲಿಯೇ ಕಟ್ಟಿ ಹಾಡುವ ನಿಪುಣತೆ ಈಕೆಗಿದೆ,

ಬೆಂಗಳೂರು, ಧಾರವಾಡ, ಗುಲ್ಬರ್ಗ ಆಕಾಶವಾಣಿಯಲ್ಲಿ ಹಲವಾರು ಬಾರಿ ಕಾರ್ಯಕ್ರಮ ನೀಡಿರುವ ಈಕೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಮಾಜಿ ಸದಸ್ಯೆ.

ಮದುವೆ ಮನೆಯಲ್ಲಿ ಸೋಬಾನದ ಹಾಡು ಹೇಳುವಾಗ ಮದುವಣಗರ ಮೇಲೆರಚಿದ ಅಕ್ಕಿಕಾಳು ಈಕೆಯ ಕಣ್ಣಿಗೆ ಬಿದ್ದು ಕಣ್ಣಿನ ಶಸ್ತ್ರಚಿಕಿತ್ಸೆಗೆ ಒಳಗಾಗಿರುವ ಗುಣಸಾಗರಿ ಎಲಿಸವ್ವರವರಿಗೆ ಹಾಡು ಎಂದೂ ಕೈಬಿಡದ ಸಂಗಾತಿ.



ಜಲವಳ್ಳಿ ವೆಂಕಟೇಶ
ಜಲವಳ್ಳಿ
ಹೊನ್ನಾವರ ತಾಲ್ಲೂಕು
ಕಾರವಾರ-581395

"ರಾತ್ರಿ ನಿದ್ದೆಗೆಟ್ಟರೆ ಆಯುಸ್ಸು ಕ್ಷೀಣಿಸುತ್ತದೆ" ಎಂಬ ನಂಬಿಕೆಯಿದ್ದಾಗ ಮನೆಯವರ ಕಣ್ತಪ್ಪಿಸಿ ರಾತ್ರಿಯೆಲ್ಲಾ ನಡೆಯುವ ಯಕ್ಷಗಾನಕ್ಕೆ ತಮ್ಮನ್ನು ಒಪ್ಪಿಸಿಕೊಂಡ ಜಲವಳ್ಳಿ ವೆಂಕಟೇಶ ಇಂದು ಹೆಸರಾಂತ ಬಣ್ಣದ ವೇಷದಾರಿ. ಇವರ ಉಗ್ರಸೇನ ಹಾಗೂ ಶನೀಶ್ವರ ಪಾತ್ರ ಇಂದಿಗೂ ಹೆಸರುವಾಸಿ. ಯಕ್ಷಗಾನದಲ್ಲಿ ಬಣ್ಣದ ವೇಷದಾರಿಯೆಂದರೆ ಅದು ಕಲಾವಿದನ ಪರಮಸಿದ್ಧಿ ಎಂದೇ ಅರ್ಥ. ಬಣ್ಣದ ವೇಷವಲ್ಲದೆ ಯಾವ ಪಾತ್ರ ಕೊಟ್ಟರೂ ಸೈ ಎನ್ನಿಸಿಕೊಳ್ಳುವ, ಮಾತುಗಾರಿಕೆಯಲ್ಲೂ ಅಪ್ರತಿಮ ಪಾಂಡಿತ್ಯವುಳ್ಳ ಜಲವಳ್ಳಿ ಕರಾವಳಿಯ ಮಹಾನ್ ನಟರಲ್ಲಿ ಒಬ್ಬರು.



ವಿ. ಎಚ್. ಜೀವನಗೌಡರ
ಅಂತರವಳ್ಳಿ,
ರಾಣೆಬೆನ್ನೂರು ತಾಲ್ಲೂಕು
ಧಾರವಾಡ ಜಿಲ್ಲೆ

ಗೊಂಬಿಗೌಡ್ರ ಎಂದೇ ಹೆಸರಾದ ವೀರನಗೌಡ ಹನುಮನಗೌಡ ಜೀವನಗೌಡರ ಯಕ್ಷಗಾನ ಸೂತ್ರದ ಗೊಂಬೆಗಳ ಆಟದಲ್ಲಿ ವಿಶಿಷ್ಟ ಅನುಭವ ಹೊಂದಿರುವ ವ್ಯಕ್ತಿ. ಝೆಕೋಸ್ಲಾವಿಯಾದ ಐದು ಊರುಗಳಲ್ಲಿ ಗೊಂಬೆಯಾಟ ಪ್ರದರ್ಶಿಸಿ ಷಹಬಾಷ್‌ಗಿರಿ ಪಡೆದ ಈತ ಪ್ರಥಮ ವಿಶ್ವ ಕನ್ನಡ ಸಮ್ಮೇಳನದಲ್ಲಿ ಪ್ರಪ್ರಥಮ ಬಾರಿಗೆ ಜೋಡಿ ಸೂತ್ರದ ಗೊಂಬೆಯಾಟ ಆಡಿದ್ದಾರೆ. ಆಕಾಶವಾಣಿ, ದೂರದರ್ಶನದಲ್ಲಿಯಲ್ಲದೇ ಹಲವು ಉತ್ಸವಗಳಲ್ಲಿ ಕಾರ್ಯಕ್ರಮ ನೀಡಿರುವ ಇವರಿಗೆ ತಂದೆ ಹನುಮನಗೌಡರೇ ಗುರು. ದೊಡ್ಡಾಟ, ಸಣ್ಣಾಟ, ಹರಿಕಥೆ, ಪುರಾಣ, ನಾಟಕಗಳಲ್ಲೂ ಇವರಿಗೆ ಅನುಭವವಿದೆ. ಜೀವನಗೌಡರ ಗೊಂಬೆಯಾಟದ ತಂಡ ಕರ್ನಾಟಕದ ಹೆಸರಾಂತ ತಂಡಗಳಲ್ಲಿ ಒಂದು.

ಕರ್ಗಿ
ತೋಟದ ಮನೆ
ಅಂಜಾರು
ಹಿರಿಯಡ್ಕ ಅಂಚೆ
ಉಡುಪಿ ತಾಲ್ಲೂಕು
ದಕ್ಷಿಣ ಕನ್ನಡ

ಪಾಡ್ದನಗಳ ರಾಣಿ ಎಂದು ಬಣ್ಣಿಸಲ್ಪಟ್ಟಿರುವ ಕರ್ಗಿ ಹರಿಜನ ಅನೇಕ ಭೂತಾರಾಧನೆಯ ಮೂಲಕಥೆಗಳನ್ನು ಹಾಡಿನ ರೂಪದಲ್ಲಿ, ಕಥೆಯ ರೂಪದಲ್ಲಿ ನಿರರ್ಗಳವಾಗಿ ಹೇಳಬಲ್ಲಾಕೆ.

ದಿನದ ಆಯಾಸದ ದುಡಿತ ಮರೆಯಲು ಏಕಾಂತದಲ್ಲಿ ಪಾಡ್ದನಗಳನ್ನು ಹಾಡಿಕೊಳ್ಳುತ್ತಿದ್ದ ಕರ್ಗಿ ಇಂದು ಅಪರೂಪದ ಪಾಡ್ದನ ಮತ್ತು ಕಥೆಗಳ ಉಗ್ರಾಣ. ವಿದೇಶಿ ವಿದ್ವಾಂಸರಿಗೆ ಪಾಡ್ದನದ ಕೈಪಿಡಿ. ತುಳುನಾಡಿನ ಸಿರಿ, ಮಂಜೊಟ್ಟಿ ಗೋಣ, ಅಬ್ಬಗ-ದಾರಗ, ನಾಗಸಿರಿ, ಚೆಲ್ಲಿ-ಪಿಲ್ಲಿ, ಹೊನ್ನುಡ-ಹೊನ್ನಮ್ಮ ಹೀಗೆ ಹಲವಾರು ಪಾಡ್ದನ ಇವರೊಟ್ಟಿಗಿವೆ. ಮೂಲ್ಕಿಯಲ್ಲಿ ನಡೆದ ಅಖಿಲ ಭಾರತ ತುಳು ಸಮ್ಮೇಳನ ಇವರನ್ನು ಸನ್ಮಾನಿಸಿದೆ.

ಗುಂಡಪ್ಪ ಘಾಳೆಪ್ಪ ಬೇಮಳಗಿ
ವಾಟರ್‌ಟ್ಯಾಂಕ್ ಹತ್ತಿರ ವಾಂಜಿರಾ,
ಹುಮ್ನಾಬಾದ್
ಬೀದರ್ ಜಿಲ್ಲೆ

ಬೀದರ್‌ನ ಆಸುಪಾಸಿನಲ್ಲಿ ಕರ್ಬಲ ಹಾಡುಗಳು ಎಷ್ಟು ಪ್ರಸಿದ್ಧವೋ ಕರ್ಬಲ ಪದಗಳಿಗೆ ದನಿ ನೀಡುವ ಗುಂಡಪ್ಪ ಘಾಳಪ್ಪ ಬೇಮಳಗಿ ಕೂಡಾ ಅಷ್ಟೇ ಹೆಸರುವಾಸಿ. ಸುಮಾರು 50 ವರ್ಷಗಳಿಂದಲೂ ಕರ್ಬಲ ಪದಗಳನ್ನು ಹಾಡುತ್ತಾ ಬಂದಿರುವ ಗುಂಡಪ್ಪನವರಿಗೆ ಈಗ 66 ವರ್ಷ. ಕಡುಬಡತನದಿಂದ ನಾಲ್ಕನೇ ತರಗತಿಗೇ ಓದಿಗೆ ವಿದಾಯ ಹೇಳಿದ ಇವರನ್ನು ಕರ್ಬಲ ಪದಗಳು ಕೈಬೀಸಿ ಕರೆದವು. ದಿನಸಿ ಅಂಗಡಿಗಳಲ್ಲಿ ಲೆಕ್ಕಪತ್ರ ಬರೆಯುತ್ತಲೇ ಇವರು ಹಾಡುಗಳಿಗೆ ದನಿಗೂಡಿಸಿದರು. ಭಜನೆ, ತತ್ವ ಪದಗಳು, ಅಲಾಯಿ ಕುಣಿತ, ಖವಾಲಿಗಳನ್ನು ಬಲ್ಲ ಗುಂಡಪ್ಪ ಹಲವರಿಗೆ ಕರ್ಬಲ ಹಾಡುಗಳನ್ನು ಕಲಿಸಿಕೊಟ್ಟಿದ್ದಾರೆ.



ಕಾಶೆಪ್ಪ ಮರೆಪ್ಪ ಹಾಲು
ಕಮಲಾಪುರ
ಕಲ್ಬುರ್ಗಿ ಜಿಲ್ಲೆ–585313

ಡಪ್ಪಿನಾಟದ ಕಾಶೆಪ್ಪ ಎಂದೇ ಹೆಸರಾಗಿರುವ ಕಾಶೆಪ್ಪ ಮರೆಪ್ಪ ಹಾಲು ಅವರಿಗೆ ಕಲೆ ಮನೆತನದಿಂದ ಬಂದ ಕೊಡುಗೆ. ಅಕ್ಷರ ಕಲಿಯಲಾಗದ ಈತನ ಕೊರಗನ್ನು ಮುಚ್ಚಿದ್ದು ಕುಣಿತ. ಕಾಡು ಮೇಡುಗಳಲ್ಲಿ ದನಕರು ಮೇಯಿಸುವಾಗ ರೂಢಿಸಿಕೊಂಡ ಕೂಗುಗಳೇ ಇವರ ಇನಿದನಿಯಲ್ಲಿ ಹಾಡುಗಳಾಗಿ ಬದಲಾದವು. ಈಗ ಊರಲ್ಲಿ ಕೋಲಾಟ ಶಬ್ದ ಕೇಳಿದರೆ ಅದು ಕಾಶೆಪ್ಪನದೇ ಸೈ ಎನ್ನುವಷ್ಟರ ಮಟ್ಟಿಗೆ ಇವರ ಹಾಡು ಕುಣಿತಗಳು ಹೆಸರುವಾಸಿ. ಹಬ್ಬ ಹರಿದಿನ ಜಾತ್ರೆಗಳಲ್ಲಿ ಡಪ್ಪಿನಾಟ, ಮೊಹರಂನಲ್ಲಿ ರಿವಾಯತ್ ಹಾಡುಗಳು ಜೊತೆಗೆ ಕುಣಿತ 65 ವರ್ಷದ ಇಳಿಗಾಲದಲ್ಲಿಯೂ ಇವರ ಎಡಬಿಡದ ಸಂಗಾತಿ. ಕೂಲಿ ಮಾಡಿ ಬದುಕು ಸಾಗಿಸುತ್ತಿರುವ ಕಾಶೆಪ್ಪ ಡಪ್ಪಿನಾಟಕ್ಕೊಂದು ಮಹತ್ವದ ಕಾಣಿಕೆ.

ಲಕ್ಷ್ಮೀಬಾಯಿ ಮಾದರ
ಮಾಲಂಗಿ ಓಣಿ
ವಾರ್ಡ್ ನಂ. 2, ಜಮಖಂಡಿ ತಾಲ್ಲೂಕು
ವಿಜಾಪುರ ಜಿಲ್ಲೆ

“ಲಕ್ಷ್ಮೀಬಾಯಿ ಮಾದರ ಹಾಡು ಹಾಡಿದರೆ ಗುಡುಗು ಗುಡುಗಿದಂತೆ” ಎಂದು ಕೇಳುಗರಿಂದ ಪ್ರಶಂಸೆ ಪಡೆದಿರುವ ಲಕ್ಷ್ಮೀಬಾಯಿ ಚೌಡಿಕೆ ಬಾರಿಸುವುದರಲ್ಲಿ ಎತ್ತಿದ ಕೈ. ಮಹಾರಾಷ್ಟ್ರ, ದೆಹಲಿ, ಮದ್ರಾಸು, ಮುಂಬೈ, ಸಿಮ್ಲಾ ಒಳಗೊಂಡಂತೆ ಇದುವರೆಗೂ ಏಳು ಸಾವಿರಕ್ಕೂ ಹೆಚ್ಚು ಕಾರ್ಯಕ್ರಮ ನೀಡಿರುವ ಲಕ್ಷ್ಮೀಬಾಯಿ ಮಾದರ ಅಪರೂಪದ ಕಲಾವಿದೆ. ನಾಲ್ಕು ಯುಗಗಳ ಪುರಾಣ, ದಶಾವತಾರ, ನೀತಿಬೋಧಕ ಪದಗಳು, ಸ್ವಾತಂತ್ರ್ಯಯೋಧರ ಕತೆಗಳನ್ನು ಈಕೆ ಸುಶ್ರಾವ್ಯವಾಗಿ ಹಾಡಬಲ್ಲಳು. ಹಲವು ನಾಟಕಗಳಲ್ಲೂ ಅಭಿನಯಿಸಿರುವ ಈಕೆಗೆ ಡಪ್ಪಿನ ಹಾಡು, ಸೋಬಾನ ಹಾಡುಗಳೂ ಕರಗತವಾಗಿವೆ.



ಕೆ. ಮಲ್ಲಾರಪ್ಪ
ಬಿನ್ ಬರಮಪ್ಪ ಚಿಕ್ಕೇರಿ
ಕುಬಟೂರು ಅಂಚೆ
ಸೊರಬ ತಾಲ್ಲೂಕು

40 ವರ್ಷಗಳಿಂದ ಯಕ್ಷಗಾನ ರಂಗದಲ್ಲಿ ಸೇವೆ ಸಲ್ಲಿಸಿರುವ ಕೆ. ಮಲ್ಲಾರಪ್ಪ ಮೂಡಲಪಾಯ ಯಕ್ಷಗಾನ ಭಾಗವತರಲ್ಲಿ ಪ್ರಮುಖರು. ರತಿಕಲ್ಯಾಣ, ಭೀಮಾರ್ಜುನ ಕಾಳಗ, ಲಂಕಾದಹನ, ಕರ್ಣಪರ್ವ ಮುಂತಾದ ಹಲವು ಮೂಡಲಪಾಯ ಬಯಲಾಟಗಳನ್ನು ಕಲಿಸಿ ಪ್ರದರ್ಶಿಸಿದ್ದಾರೆ. ಸುಮಾರು 25 ಹಸ್ತಪ್ರತಿಗಳು ಇವರ ಸಂಗ್ರಹದಲ್ಲಿವೆ. ತಾವೇ ಹಲವು ಪ್ರಸಂಗಗಳನ್ನೂ ರಚಿಸಿದ್ದಾರೆ. ಹತ್ತಾರು ಜನರಿಗೆ ತಮ್ಮ ಕಲೆಯನ್ನು ಸಿರ್ವಂಚನೆಯಿಂದ ಕಲಿಸಿರುವ ಮಲ್ಲಾರಪ್ಪ ಹಳೇ ಪರಂಪರೆಯ ಕಲಾವಿದರಲ್ಲಿ ಪ್ರಮುಖರು.

ದುರ್ಗಮ್ಮ ಬ್ಯಾಡರ

ರಾಫ್ ಶಾಂತಾ ಕುಲಕರ್ಣಿ ಹರದರ

ದಾನಪ್ಪ

ಸ್ಟೈನ್ ಕಟ್ಟಡ, ಐ. ಬಿ. ರಸ್ತೆ

ಆರ್.ಟಿ.ಓ. ಹಿಂದೆ, ರಾಯಚೂರು

ರಾಯಚೂರು ಜಿಲ್ಲೆಯ ಕೊತ್ತಾದೊಡ್ಡಿ ತಾಲ್ಲೂಕಿನ ದುರ್ಗಮ್ಮ ಬ್ಯಾಡರ ಕೂಲಿ ಮಾಡುತ್ತಲೇ 40 ವರ್ಷಗಳ ಕಾಲ ಹಾಡುಗಳೊಡನೆ ಕಾಲ ದೂಡಿದ್ದಾರೆ. 58 ವರ್ಷದ ದುರ್ಗಮ್ಮ ಇಂದು ಮದುವೆ, ಮುಂಜಿ, ಹಬ್ಬ ಹುಣ್ಣಿಮೆಗಳಲ್ಲಿನ ಅವಿಭಾಜ್ಯ ಅಂಗ. ಅಕ್ಕ ಹನುಮವ್ವನಿಂದ ಹಾಡು ಕಲಿತ ದುರ್ಗಮ್ಮ ಅರ್ಥಪೂರ್ಣ ಕಲಾವಿದೆ. ಹುಟ್ಟು ಮೂಕ ಹಾಗೂ ಕಿವುಡ ಗಂಡನ ಜೊತೆ ಸಂತೋಷವಾಗಿಯೇ ಕಾಲ ನೂಕಿದ ಈಕೆ ತನ್ನೆಲ್ಲ ನೋವನ್ನು ಮರೆತು ತನ್ನನ್ನು ಕಲೆಗೆ ಅರ್ಪಿಸಿಕೊಂಡವಳು.

ಮಲ್ಲಪ್ಪ ತಮ್ಮಣ್ಣ ದಡೆಣ್ಣವರ
ಸಾಲಹಳ್ಳಿ
ರಾಮದುರ್ಗ ತಾಲ್ಲೂಕು
ಬೆಳಗಾವಿ ಜಿಲ್ಲೆ

ತಂದೆಯಿಂದ ಲಾವಣಿ ಕಲಿತ ಮಲ್ಲಪ್ಪ ತಮ್ಮಣ್ಣ ದಡೆಣ್ಣವರ ಇದೀಗ ಮಹಾಂತೇಶ ಗೀಗೀ ಮೇಳದ ಸ್ಥಾಪಕ. 250ಕ್ಕೂ ಹೆಚ್ಚು ಗೀಗೀ ಪದಗಳನ್ನು ಕಲಿತಿರುವ ಇವರು ಮಹಾರಾಷ್ಟ್ರದಲ್ಲಿ ನಡೆದ ಜಾನಪದ ಉತ್ಸವದಲ್ಲಿ ಕರ್ನಾಟಕ ವನ್ನು ಪ್ರತಿನಿಧಿಸಿದ್ದಾರೆ. ಆಕಾಶವಾಣಿಯಲ್ಲಿ ಹಲವು ಬಾರಿ ಕಾರ್ಯಕ್ರಮ ನೀಡಿದ್ದಾರೆ. ಗೀಗಿ ಹಾಡಿನ ಮೂಲಕ ಲೋಕತಿದ್ದುವ ತವಕ ಹೊಂದಿದ ದಡೆಣ್ಣನವರ ಕಲ್ಗಿ-ತುರಾ ಸಂಪ್ರದಾಯದಲ್ಲಿಯೂ ಪಳಗಿದವರು. ತಮ್ಮನ್ನು ನೆಚ್ಚಿದ ಅನೇಕರಿಗೆ ಗೀಗೀ ಗುರುವಾದವರು.

ವೆಂಕಟಮ್ಮ
ಸಿದ್ದಲಿಂಗಪುರ
ಗೋಣಿ ಮರೂರು ಅಂಚೆ
ಕುಶಾಲನಗರ
ಸೋಮವಾರಪೇಟೆ ತಾಲ್ಲೂಕು
ಕೊಡಗು ಜಿಲ್ಲೆ

ಕೊರಗರ ವೆಂಕಟಮ್ಮ ಹಾಡುಗಳನ್ನು ಕಲಿತದ್ದು ತಮ್ಮ ಅತ್ತೆಯಿಂದ. ಉತ್ತರದೇವಿ, ಹೊನ್ನಮ್ಮ, ಕಪ್ಪಡಿ ರಾಜಪ್ಪ, ಮುಂತಾದ ಗೀತೆಗಳಲ್ಲದೆ ರಾಗಿ ಬೀಸುವ ಹಾಡು, ಸೋಬಾನೆ ಪದಗಳು ಇವರಿಗೆ ಕಂಠಪಾಠವಾಗಿದೆ. ಹಾಡು ಹೇಳುವುದರೊಂದಿಗೆ ಶಾಸ್ತ್ರ ಹೇಳುವುದು, ಬಲಿ ತೆಗೆಯುವುದು ಇವರ ಹವ್ಯಾಸ. 70 ವರ್ಷದ ಈಕೆ ಹಲವರಿಗೆ ಹಾಡುಗಳನ್ನು ಕಲಿಸಿದ ಪ್ರತಿಭಾವಂತ ಕಲಾವಿದೆ. ಅತ್ಯಂತ ಹಿಂದುಳಿದ ಕೊರಗ ಬುಡಕಟ್ಟು ಜನಾಂಗದ ಈಕೆ ಇದೀಗ ಮುಪ್ಪಿನಲ್ಲಿ ತನ್ನೆಲ್ಲಾ ಕಷ್ಟಸುಖಗಳನ್ನು, ಹಾಡುತ್ತಾ ಮರೆಯುವಾಕೆ.

ಜಿ. ಪಿ. ಜಗದೀಶ್
ಗಿರಿಯಾಪುರ
ಕಡೂರು ತಾಲ್ಲೂಕು
ಚಿಕ್ಕಮಗಳೂರು ಜಿಲ್ಲೆ

ಜಿ. ಪಿ. ಜಗದೀಶ್ ವೀರಗಾಸೆ ಕಲಾವಿದ. ತಂದೆ ಹೇಳುತ್ತಿದ್ದ ಕಥೆ, ವಚನಗಳಿಂದ ಪ್ರಭಾವಿತರಾದ ಇವರು ವೀರಗಾಸೆ ಕುಣಿತವನ್ನು ಕರಗತ ಮಾಡಿಕೊಂಡರು. ಸಾರ್ಕ್ ಸಮ್ಮೇಳನ, ಅಪ್ನಾ ಉತ್ಸವ, ದಸರಾ ಮೆರವಣಿಗೆಗಳು ಲೋಕೋತ್ಸವ, ಸೋವಿಯತ್-ಭಾರತ ಉತ್ಸವಗಳಲ್ಲದೆ 'ಕನಕಪುರಂದರ' ಹಾಗೂ 'ಬೆರಳ್ಗೆ - ಕೊರಳ್' ಚಿತ್ರಗಳಲ್ಲಿಯೂ ಕುಣಿತ ಪ್ರದರ್ಶಿಸಿದ್ದಾರೆ. ನಾಟಕ, ಕೋಲಾಟ ಇವರ ಹವ್ಯಾಸ. ಪ್ರತಿಭೆಗೆ ತಕ್ಕ ಸಜ್ಜನಿಕೆ ಮತ್ತು ಸಹೃದಯಿ ಜಗದೀಶ್ ಚಿಕ್ಕಮಗಳೂರು ಜಿಲ್ಲೆಯ ಒಬ್ಬ ಹೆಸರಾಂತ ವೀರಗಾಸೆ ಕಲಾವಿದ. ನೂರಾರು ಜನಕ್ಕೆ ಕಲೆಯನ್ನು ಕಲಿಸಿದ ಪ್ರತಿಭಾವಂತ.

ಗೊಂಬೆರಾಮರ ರಾಮಯ್ಯ
ಹೊಸಕೊಪ್ಪಲು
ಹಳೆಬೆಳಗೊಳ ಅಂಚೆ
ಚನ್ನರಾಯಪಟ್ಟಣ ತಾಲ್ಲೂಕು
ಹಾಸನ ಜಿಲ್ಲೆ

ಈಗಿನ ಕೆಲವೇ ಮಂದಿ ಹಿರಿಯ ಗೊಂಬೆಯಾಟ ಕಲಾವಿದರಲ್ಲಿ ಒಬ್ಬರಾದ ಗೊಂಬೆರಾಮರ ರಾಮಯ್ಯ ತೊಗಲುಗೊಂಬೆಯಾಟದಲ್ಲಿ ಅಪಾರ ಪರಿಶ್ರಮ ವಿರುವ ವ್ಯಕ್ತಿ. ತೊಗಲುಗೊಂಬೆಯಾಟವನ್ನು ತನ್ನ ಮೂಲಸಂಪ್ರದಾಯದಲ್ಲಿ ಉಳಿಸಿಕೊಂಡು ಬಂದಿರುವ ಇವರು ಒಳ್ಳೆಯ ಭಾಗವತರೂ ಹೌದು. ರಾಮಾಯಣ, ಮಹಾಭಾರತ, ಶಿವಪುರಾಣದ ಕತೆಗಳನ್ನು ವಿಶಿಷ್ಟ ಕೈಚಳಕದಿಂದ ಪ್ರದರ್ಶಿಸಬಲ್ಲರು. ಇವರ ಗೊಂಬೆಯಾಟಗಳನ್ನು ವಿದೇಶಿ ವಿದ್ವಾಂಸರೂ ದಾಖಲೆ ಮಾಡಿಕೊಂಡಿದ್ದಾರೆ. ಗೊಂಬೆ ತಯಾರಿಕೆ ಹಾಗೂ ಅದಕ್ಕೆ ಬಣ್ಣ ಕೊಡುವುದರಲ್ಲಿಯೂ ನಿಷ್ಣಾತರಾದ ರಾಮಯ್ಯ ಗೊಂಬೆಯಾಟದ ಉಳಿಯು ವಿಕೆಗೆ ಒಂದು ಸ್ಫೂರ್ತಿ.



ಅಜ್ಜಣ್ಣ ಬಡಿಗೇರ
ಕೊಂಡಜ್ಜಿ ಅಂಚೆ
ಹರಿಹರ ತಾಲ್ಲೂಕು
ಚಿತ್ರದುರ್ಗ ಜಿಲ್ಲೆ

ಕುಸ್ತಿಪಟುವಾಗಿ ಹೆಸರಾಗಿದ್ದ ಅಜ್ಜಣ್ಣನವರನ್ನು ಅಪ್ಪಿಕೊಂಡಿದ್ದು ಬಯಲಾಟ. ಇದೀಗ ಮೈಲಾರ ಲಿಂಗೇಶ್ವರ ದೇವರ ಸೇವೆ ಸಲ್ಲಿಸುತ್ತಿರುವ ಅಜ್ಜಪ್ಪ ಬಾಲ್ಯದಲ್ಲಿ ಸ್ತ್ರೀಪಾತ್ರಗಳಿಗೆ ಎತ್ತಿದ ಕೈ. 80ನೆಯ ಇಳಿ ವಯಸ್ಸಿನಲ್ಲಿಯೂ ಕಲೆಯನ್ನು ಇವರು ಕೈಬಿಟ್ಟಿಲ್ಲ. ಚಿತ್ರದುರ್ಗ, ಶಿವಮೊಗ್ಗ, ಬಳ್ಳಾರಿ ಜಿಲ್ಲೆಗಳಲ್ಲಿ ಹಲವಾರು ಪ್ರದರ್ಶನ ನೀಡಿರುವ ಇವರು ಹಲವು ಬಯಲಾಟಗಳಲ್ಲಿ ಅಭಿನಯಿಸಿ ನಿರ್ದೇಶಿಸಿದ್ದಾರೆ. ಬೀಮಾರ್ಜುನ ಕಾಳಗ, ಶಶಿರೇಖಾ ಪರಿಣಯ, ಕಮಲಗಂಧಿ, ಸಂಗ್ಯಾಬಾಳ್ಯಾ, ಲಕ್ಷ್ಮೀ ಸ್ವಯಂವರ, ಕನಕಾಂಗಿ ಕಲ್ಯಾಣ ಇವರ ಪ್ರಮುಖ ಬಯಲಾಟ ಪ್ರಸಂಗಗಳು.

ಎನ್. ಚಿಕ್ಕವೆಂಕಟಪ್ಪ
448, ಒಂದನೇ ವಾರ್ಡ್
ವೀರಭದ್ರಪ್ಪನ ಪೇಟೆ
ದೊಡ್ಡಬಳ್ಳಾಪುರ

ಯಕ್ಷಗಾನ ಭಾಗವತ ಎನ್. ಚಿಕ್ಕವೆಂಕಟಪ್ಪ ಮಗ್ಗಗಳ ಒಡನಾಟದಲ್ಲಿ ಬೆಳೆದವರು. 'ಕರಿರಾಜ ಚರಿತ್ರೆ' ಇವರ ಅಚ್ಚುಮೆಚ್ಚಿನ ಪ್ರಸಂಗ. ಯದ್ಲಳ್ಳಿ ಪಾಪಣ್ಣನವರ ಯಕ್ಷಗಾನ ಮಂಡಲಿಯ ಕರಿರಾಜ ಚರಿತ್ರೆಯಲ್ಲಿ ಬೊಮ್ಮ ರಾಕ್ಷಸನ ಪಾತ್ರವನ್ನು ಸತತವಾಗಿ 30 ವರ್ಷಗಳ ಕಾಲ ನಿರ್ವಹಿಸಿದ ಹೆಮ್ಮೆ ಇವರದ್ದು. ವ್ಯವಸಾಯ, ಯಕ್ಷಗಾನ ಹಾಗೂ ಹವ್ಯಾಸಿ ನಾಟಕ ಸ್ಪರ್ಧೆಯ ಹಲವು ಪ್ರಶಸ್ತಿಗಳನ್ನು ಇವರು ಗೆದ್ದಿದ್ದಾರೆ. ಅಭಿನಯದ ಜೊತೆಗೆ ಪ್ರಸಾಧನ ಕೂಡ ಇವರಿಗೆ ಕುತೂಹಲಕರವಾದ ಕ್ಷೇತ್ರ. ಕನಕದಾಸ ಪ್ರಶಸ್ತಿ ವಿಜೇತರಾದ ಇವರು ಹಲವು ವಿಶೇಷ ಪುರಸ್ಕಾರಗಳನ್ನೂ ಪಡೆದಿದ್ದಾರೆ.



ಪಿ. ರಾಮರಾವ್
ಜೀಕವಾಂಡ್ಲಪಲ್ಲಿ
ಬಾಗೇಪಲ್ಲಿ ತಾಲ್ಲೂಕು
ಕೋಲಾರ ಜಿಲ್ಲೆ

63 ವರ್ಷದ ಹಿರಿಯ ಪಿ. ರಾಮರಾವ್ ತೊಗಲುಗೊಂಬೆಯಾಟದ ಕಲಾವಿದ. 45 ವರ್ಷಗಳ ಕಾಲ ಈ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಇವರಿಗೆ ನಾಟಕ ಹವ್ಯಾಸ. ವಂಶಪಾರ್ಯಂಪರವಾಗಿ ಬಂದ ಕಲೆಯನ್ನು ಈಗಲೂ ಇವರು ಕೈಹಿಡಿದು ನಡೆಸುತ್ತಿದ್ದಾರೆ. ಕೇಂದ್ರ ಸಂಗೀತ ನಾಟಕ ಅಕಾಡೆಮಿ ಕುವೆಂಪು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯದ ಕಾರ್ಯಾಗಾರ-ಉತ್ಸವಗಳಲ್ಲಿ ತೊಗಲುಗೊಂಬೆಯಾಟ ಪ್ರದರ್ಶಿಸಿದ್ದಾರೆ. ಆಳೆತ್ತರದ ಗೊಂಬೆಗಳ ಹಿಂದೆ ನಿಂತು, ಗೊಂಬೆಗೆ ತನ್ನದೇ ಜೀವ ತುಂಬುವ ರಾಮರಾವ್, ತೆಲುಗು ಸಂಪ್ರದಾಯದ ತೋಳು ಬೊಮ್ಮಲಾಟದ ಒಬ್ಬ ಅಪೂರ್ವ ಕಲಾವಿದ.



ಕರಗದ ಕೆಂಪಣ್ಣ
ಸಮುದೂರು
ಸಬಾ ಹೋಬಳಿ
ನೇಕಲ್ ತಾಲ್ಲೂಕು
ಬೆಂಗಳೂರು ಜಿಲ್ಲೆ

ವೃತ್ತಿಯಿಂದ ಅರ್ಚಕರಾದ ಕೆಂಪಣ್ಣನವರಿಗೆ ಕರಗದ ಕುಣಿತ ಆಸಕ್ತಿಯ ಕ್ಷೇತ್ರವಾಯಿತು. ಕರಗದ ಕುಣಿತ, ಪೂಜಾಕುಣಿತ, ಒನಕೆ ಕುಣಿತ ಹಾಗೂ ಯಕ್ಷಗಾನವನ್ನೂ ಕಲಿತಿರುವ ಕೆಂಪಣ್ಣ ಕರಗದ ಕೆಂಪಣ್ಣ ಎಂದೇ ಹೆಸರುವಾಸಿ. ದೆಹಲಿ, ಮುಂಬೈನಲ್ಲಿ ನಡೆದ ಅಪ್ನಾ ಉತ್ಸವದಲ್ಲಿ ಭಾಗವಹಿಸಿರುವ ಇವರನ್ನು ಕೇಂದ್ರ ಸಂಗೀತ ನಾಟಕ ಅಕಾಡೆಮಿ 1966ರಲ್ಲಿ ಪ್ರಶಸ್ತಿಪತ್ರ ನೀಡಿ ಗೌರವಿಸಿತ್ತು. ಕರಗ ಕುಣಿತಕ್ಕಿರಬೇಕಾದ ವಿಶೇಷ ಚಾಕಚಕ್ಯತೆಯೇ ಇವರ ಈ ಇಳಿವಯಸ್ಸಿನ ಆಸ್ತಿ. ತನ್ನ ಹಿಂದಿನ ಹತ್ತಾರು ಜನರಿಗೆ ಕರಗದ ಕಲೆಯನ್ನು ಕರಗತ ಮಾಡಿಸಿರುವ ಶ್ರೀ ಕೆಂಪಣ್ಣ ಇಡೀ ದೇಶಾದ್ಯಂತ ನೂರಾರು ಪ್ರದರ್ಶನ ನೀಡಿದ್ದಾರೆ,



ದೊಂಬಿದಾಸರ ವೆಂಕಟಪ್ಪ
ನೆಲಮನೆ ಅಂಚೆ
ಶ್ರೀರಂಗಪಟ್ಟಣ ತಾಲ್ಲೂಕು
ಮಂಡ್ಯ ಜಿಲ್ಲೆ

ಬಳೆ ವೆಂಕಟಪ್ಪ ಎಂದೇ ಹೆಸರಾದ ಚಿಮ್ಮನಹಳ್ಳಿ ವೆಂಕಟಪ್ಪ 25ಕ್ಕೂ ಹೆಚ್ಚು ಸುದೀರ್ಘ ಲಾವಣಿಗಳನ್ನು ಹಾಡಬಲ್ಲವರು. ದೊಂಬಿದಾಸರ ಸಂಪ್ರದಾಯದ ವೃತ್ತಿಗಾಯಕರಾದ ಇವರು ಮಾಗಡಿ ಕೆಂಪೇಗೌಡ, ಬಾಲನಾಗಮ್ಮ, ಗಂಗೆ ಗೌರಿ ಮೊದಲಾದ ಜನಪದ ಕಾವ್ಯಗಳನ್ನು ಹಾಡುತ್ತಾರೆ. ಸುಶ್ರಾವ್ಯ ಕಂಠದ ವೆಂಕಟಪ್ಪ ದೊಂಬಿದಾಸರ ಹಾಡುಗಾರಿಕೆಯಲ್ಲಿ 40 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಇವರ ಹಾಡುಗಳನ್ನು ಈಗಾಗಲೇ ಅನೇಕರು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಸುಶ್ರಾವ್ಯ ಕಂಠ ಹಾಗೂ ಸ್ಪಷ್ಟ ಮಾತುಗಾರಿಕೆಯಿರುವ ವೆಂಕಟಪ್ಪ ಒಬ್ಬ ಉತ್ತಮ ಕಲಾವಿದ.

ಲಾವಣಿ ಸಂಜೀವಮೂರ್ತಿ
4034, 8ನೇ ಕ್ರಾಸ್
ಗಾಂಧಿನಗರ, ಮೈಸೂರು-7

ಉತ್ತರ ಕರ್ನಾಟಕದಲ್ಲಿ ಪ್ರಸಿದ್ಧವಾಗಿರುವ ಕಲ್ಗಿ-ತುರಾ ಸಂಪ್ರದಾಯ ಒಂದು ಕಾಲಕ್ಕೆ ಮೈಸೂರು ಭಾಗದಲ್ಲಿಯೂ ಜನಪ್ರಿಯವಾಗಿತ್ತು ಎನ್ನುವುದಕ್ಕೆ ಲಾವಣಿ ಸಂಜೀವಯ್ಯನವರೇ ಸಾಕ್ಷಿ. ಗುಳೇಶ್ವರರಿಂದ ಲಾವಣಿ ಕಲಿತ ಸಂಜೀವ ಮೂರ್ತಿ ಚಾರಣರಂತೆ ಊರೂರು ಸಂಚರಿಸಿ ಸವಾಲ್ ಜವಾಬ್ ಲಾವಣಿಗಳನ್ನು ಹಾಡಿ ಹೆಸರಾಗಿದ್ದಾರೆ. ನೂರಾರು ಲಾವಣಿಗಳನ್ನು ಹಾಡಬಲ್ಲ 73 ವರ್ಷದ ಇವರು ಗುರುದೀಕ್ಷೆ ಪಡೆದು ತತ್ವಪದಗಳನ್ನೂ ಹಾಡುತ್ತಾರೆ. ಲಾವಣಿ ಅಲ್ಲದೆ ಹಲವು ರೀತಿಯ ತತ್ವ, ಜನಪದಗೀತ ಪ್ರಕಾರಗಳನ್ನು ಕರಗತ ಮಾಡಿಕೊಂಡಿರುವ ಸಂಜೀವಮೂರ್ತಿ ಇಂದಿಗೂ ಜನಪ್ರಿಯ ಕಲಾವಿದ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಅಧ್ಯಕ್ಷರು : **ಡಾ. ಎಸ್. ಕೆ. ಕರೀಂಖಾನ್**

ಸದಸ್ಯರು :

ಡಾ. ಜೀ.ಶಂ. ಪರಮಶಿವಯ್ಯ
ಡಾ. ಕಾಳೇಗೌಡ ನಾಗವಾರ
ಗೊ. ರು. ಚನ್ನಬಸಪ್ಪ
ಮಿಯಾರ್ ಲಕ್ಷ್ಮೀನಾರಾಯಣ ಆಳ್ವ
ಎನ್. ಹುಂಚ್ಚಪ್ಪ ಮಾಸ್ತರ
ಯಳಸಂಗಿ ಕಲ್ಲಣ್ಣ
ಗೋವಿಂದ ನಾರಾಯಣ ಮಹಾಲೆ
ಕೆರೆಮನೆ ಮಹಾಬಲ ಹೆಗಡೆ
ಮುದೇನೂರ ಸಂಗಣ್ಣ

ಜಿ. ಮಹಾಂತೇಶ್
ಡಾ. ಚನ್ನಣ್ಣ ವಾಲೀಕಾರ
ಡಾ. ನಿಂಗಣ್ಣ ಸಣ್ಣಕ್ಕಿ
ಡಾ. ದೇವೇಂದ್ರಕುಮಾರ ಹಕಾರಿ
ಡಾ. ಸೋಮಶೇಖರ ಇಮ್ರಾಪುರ
ಕೆ. ಜಿ. ದೇಶಪಾಂಡೆ
ಬಾನಂದೂರು ಕೆಂಪಯ್ಯ
ಕೆ. ಆರ್. ಲಿಂಗಪ್ಪ
ಡಿ. ಜೆ. ಪದ್ಮನಾಭ

ಡಾ. ವಿಲಿಯಂ ಮಾಡ್ತ
ಶ್ರೀಮತಿ ಗೌರವ್ವ ಮಾದರ
ರಂಗಾರೆಡ್ಡಿ ಕೋಡಿರಾಂಪುರ
ಎ. ಕೆ. ರಾಮೇಶ್ವರ
ಹೆಚ್. ಕಾಶೀನಾಥರೆಡ್ಡಿ
ಶ್ರೀಮತಿ ಪಿ. ಎ. ತುಳಸಿದೇವಿ
ಎಂ. ಸಿದ್ದಲಿಂಗಯ್ಯ
ಅರ್ಥ ಸದಸ್ಯರು

ರಿಜಿಸ್ಟ್ರಾರ್ : **ಹಿ. ಚಿ. ಬೋರಲಿಂಗಯ್ಯ**

ಕಾರ್ಯಾಲಯ :

14/3, ಕೆನರಾ ಫೈನಾನ್ಸ್ ಕಾರ್ಪೊರೇಷನ್ ಕಟ್ಟಡ, ನೃಪತುಂಗ ರಸ್ತೆ,
ಬೆಂಗಳೂರು–560 002, ದೂರವಾಣಿ : 215509

ರಾಗಿ ಕಲ್ಲಿನ ಮೇಲೆ ಚೆಲ್ಲೀದೆ ನಮ್ಮ ಹಾಡಂ

ಬಲ್ಲಂತ ಜಾಣರು ಬರಕೊಳ್ಳಿ । ನಮ್ಮ ಹಾಡ

ಬಳ್ಳ ತಕ್ಕೊಂಡು ಅಳಕೊಳ್ಳಿ